118

# ಜಿಲ್ಲಾ ದಂಡಾಧಿಕಾರಿಗಳು, ಹಾಸನ ಜಿಲ್ಲೆ,ಹಾಸನ ರವರ ನಡವಳಿಗಳು

ವಿಷಯ:- ತುಮಕೂರು ಜಿಲ್ಲೆಯ 130-ತುರುವೇಕೆರೆ ಮತ್ತು 138-ಮಧುಗಿರಿ ವಿಧಾನಸಭಾ ಕ್ಷೇತ್ರಗಳಲ್ಲಿ ಉಪ ಚುನಾವಣೆ ಸಂಬಂಧ ಮದ್ಯ ಸಾಗಾಣಿಕೆ ನಿರ್ಬಂಧಿಸುವ ಬಗ್ಗೆ.

ಉಲ್ಲೇಕ:-1.ಭಾರತ ಚುನಾವಣಾ ಆಯೋಗದ ಪತ್ರಿಕಾ ಪ್ರಕರಣೆ ನಂ.ಇಸಿಐ ಪಿಎನ್ 32/ 2008 ದಿನಾಂಕ 23-11-2008 ಮತ್ತು 27-11-2008.

2.ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ದಂಡಾಧಿಕಾರಿಗಳು, ತುಮಕೂರು ಜಿಲ್ಲೆ ಇವರ ಅ.ಸ.ಪ.ನಂ.ಚು(1)ವಿವ 42/08-09 ದಿನಾಂಕ 03-12-2008.

ಪ್ರಸ್ತಾವನೆ:-

ಭಾರತ ಚುನಾವಣಾ ಆಯೋಗದ ಪ್ರಕಟಣೆಯನ್ವಯ ತುಮಕೂರು ಜಿಲ್ಲೆಯ 130-ತುರುವೇಕೆರೆ ಮತ್ತು 138-ಮಧುಗಿರಿ ಕ್ಷೇತ್ರಗಳಿಗೆ ದಿನಾಂಕ 27-12-2008 ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯಲಿರುವುದರಿಂದ, ಅಲ್ಲಿಯ ಚುನಾವಣಾ ಕಾರ್ಯವನ್ನು ಶಾಂತಿಯುತವಾಗಿ ನಡೆಸಲು ಹಾಗೂ ಈ ಸಮಯದಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಹಾಗೂ ಸಾರ್ವಜನಿಕರ ಆಸ್ತಿಪಾಸ್ತಿಗೆ ತೊಂದರೆಯಾಗದಂತೆ ತುಮಕೂರು ಜಿಲ್ಲೆಯ ಗಡಿ ಭಾಗಕ್ಕೆ ಹೊಂದಿಕೊಂಡಿರುವ ಹಾಸನ ಜಿಲ್ಲೆಯ ಗಡಿಭಾಗದ ಪ್ರದೇಶದಲ್ಲಿ ಮಧ್ಯ ಮಾರಾಟ ನಿಷೇಧಿಸಲು ಉಲ್ಲೇಖ (2) ಪತ್ರರವರು ಕೋರಿರುತ್ತಾರೆ. ಅದರಂತೆ ಹಾಸನ ಜಿಲ್ಲೆಯಲ್ಲಿ ದಿನಾಂಕ 25-12-2008ರ ರಾತ್ರಿ 12-00 ಗಂಟೆಯಿಂದ ದಿನಾಂಕ 27-12-2008ರ ರಾತ್ರಿ 12-00 ಗಂಟೆಯವರೆಗೆ ಹಾಸನ ಜಿಲ್ಲೆಯ ಗಡಿಭಾಗದ ಪ್ರದೇಶದ 5 ಕಿ.ಮೀ.ವ್ಯಾಪ್ತಿಯವರೆಗೆ ಮಧ್ಯ ಶೇಖರಣೆ, ಸಾಗಾಣಿಕೆ, ಮಾರಾಟ ಮತ್ತು ಬಾರ್/ವೈನ್ ಅಂಗಡಿಗಳು ತೆರೆಯುವುದನ್ನು ನಿಷೇಧಿಸುವುದು ಹಾಗೂ ಈ ದಿನಗಳನ್ನು ಒಣ ದಿನಗಳೆಂದು ಘೋಷಿಸುವ ಅಗತ್ಯತೆ ಇರುವುದರಿಂದ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ:ಎಂ.ಎ.ಜಿ.624/08-09 ದಿನಾಂಕ 19-12-2008.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ 2(1)ರಲ್ಲಿ ನನಗೆ ದತ್ತಾಗಿರುವ ಅಧಿಕಾರದ ಮೇಲೆ ಹಾಸನ ಜಿಲ್ಲಾ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ನವೀನ್ ರಾಜ್ ಸಿಂಗ್, ಭಾ.ಆ.ಸೇ., ಆದ ನಾನು ದಿನಾಂಕ 25-12-2008ರ ರಾತ್ರಿ 12-00 ಗಂಟೆಯಿಂದ ದಿನಾಂಕ 27-12-2008ರ ರಾತ್ರಿ 12-00 ಗಂಟೆಯವರೆಗೆ ಹಾಸನ ಜಿಲ್ಲೆಯ ಗಡಿಭಾಗ ಪ್ರದೇಶದ 5 ಕಿ.ಮೀ.ವ್ಯಾಪ್ತಿಯಲ್ಲಿ ಮಧ್ಯ ಶೇಖರಣೆ, ಸಾಗಾಣಿಕೆ, ಮಾರಾಟ ನಿಷೇಧಿಸಿದೆ ಹಾಗೂ ಈ ದಿನಗಳಲ್ಲಿ ವ್ಯಾಪ್ತಿಗನುಗುಣವಾಗಿ ಒಣ ದಿನಗಳೆಂದು ಘೋಷಿಸಲಾಗಿದೆ.

ಈ ಆದೇಶ ಉಲ್ಲಂಘಿಸುವವರ ವಿರುದ್ಧ ಚಾಲ್ತಿಯಲ್ಲಿರುವ ಅಬಕಾರಿ ನಿಯಮಗಳ ರೀತ್ಯಾ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಯಪಡಿಸಲಾಗಿದೆ.

(ನವೀನ್ ರಾಜ್ ಸಿಂಗ್),
ಜಿಲ್ಲಾ ದಂಡಾಧಿಕಾರಿಗಳು,
ಹಾಸನ ಜಿಲ್ಲೆ, ಹಾಸನ.

23/12/08

ಪ್ರತಿಯನ್ನು:-

1. ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು.
2. ಆರಕ್ಷಕ ಅಧೀಕ್ಷಕರು, ಹಾಸನ/ತುಮಕೂರು ಜಿಲ್ಲೆರವರಿಗೆ ಸೂಕ್ತ ಕ್ರಮಕ್ಕಾಗಿ.
3. ಅಬಕಾರಿ ಅಧೀಕ್ಷಕರು, ಅಬಕಾರಿ ಇಲಾಖೆ, ಹಾಸನ/ತುಮಕೂರು ಜಿಲ್ಲೆ
4. ಅಬಕಾರಿ ಉಪ ಆಯುಕ್ತರು, ಹಾಸನ/ತುಮಕೂರು ಜಿಲ್ಲೆ
5. ಉಪ ವಿಭಾಗಾಧಿಕಾರಿಗಳು, ಹಾಸನ ಉಪ ವಿಭಾಗ, ಹಾಸನ
6. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ಹಾಸನ ರವರಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
7. ಆರಕ್ಷಕ ಉಪ ಅಧೀಕ್ಷಕರು, ಅರಸೀಕೆರೆ/ಹೊಳೆನರಸೀಪುರ ರವರಿಗೆ ಸೂಕ್ತ ಕ್ರಮಕ್ಕಾಗಿ.
8. ಆರಕ್ಷಕ ವೃತ್ತ ನಿರೀಕ್ಷಕರು, ಹಾಸನ/ಅರಸೀಕೆರೆ/ಚನ್ನರಾಯಪಟ್ಟಣ
9. ತಹಸೀಲ್ದಾರರು, ಅರಸೀಕೆರೆ/ಚನ್ನರಾಯಪಟ್ಟಣ.
10. ಅಬಕಾರಿ ನಿರೀಕ್ಷಕರು, ಅರಸೀಕೆರೆ/ಚನ್ನರಾಯಪಟ್ಟಣ.